# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಟಿ.ಎನ್.ಜವರಾಯಿಗೌಡ (ವಿಧಾನಸಭೆಯಿಂದ ಚುನಾಯಿತರಾದವರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 162

ಉತ್ತರಿಸಬೇಕಾದ ದಿನಾಂಕ : 10-12-2024

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಯಶಸ್ವಿನಿ ಯೋಜನೆಯನ್ನು ಯಾವಾಗಿನಿಂದ ಜಾರಿಗೆ ತರಲಾಗಿದೆ ಇದರ ಧ್ಯೇಯೋದ್ದೇಶಗಳೇನು: (ವಿವರ ನೀಡುವುದು) | ಯಶಸ್ವಿನಿ ಯೋಜನೆಯನ್ನು 2003 ಜೂನ್ ಮಾಹೆಯಲ್ಲಿ ಪ್ರಾರಂಭಿಸಿದ್ದು, 2003-04 ರಿಂದ 2017-18 ರವರೆಗೆ ಜಾರಿಯಲ್ಲಿದ್ದು, ದಿನಾಂಕ: 31-05-2018 ರಂದು ಸ್ಥಗಿತಗೊಳಿಸಲಾಗಿರುತ್ತದೆ.<br><br>ಪರಿಷ್ಕೃತ ಯಶಸ್ವಿನಿ ಯೋಜನೆಯನ್ನು ರಾಜ್ಯದಲ್ಲಿ 2022-23 ರಿಂದ ಮರುಜಾರಿಗೊಳಿಸಿದೆ.<br><br>2024-25ನೇ ಸಾಲಿಗೂ ಸಹ ಈ ಯೋಜನೆಯನ್ನು ಮುಂದುವರೆಸಲು ಸರ್ಕಾರವು ದಿನಾಂಕ: 30-11-2024 ರಂದು ಆದೇಶ ಹೊರಡಿಸಿದೆ.<br><br>ಸಹಕಾರ ಸಂಘ, ಸೌಹಾರ್ದ ಸಹಕಾರಿ, ಬಹುರಾಜ್ಯ ಸಹಕಾರ ಸಂಘ, ಸ್ವ-ಸಹಾಯ ಗುಂಪುಗಳ ಖಾಯಂ ಸದಸ್ಯರು ವಂತಿಕೆ ಪಾವತಿಸಿ ವಯೋಮಿತಿ ನಿರ್ಬಂಧವಿಲ್ಲದೇ ಸದಸ್ಯರಾಗಿ ಆರೋಗ್ಯ ಚಿಕಿತ್ಸೆಯನ್ನು ಪಡೆಯುವ ಧ್ಯೇಯೋದ್ದೇಶಗಳನ್ನು ಹೊಂದಿರುತ್ತದೆ.<br><br>ಯೋಜನೆಯಡಿ ಇರುವ ಧ್ಯೇಯೋದ್ದೇಶಗಳ ವಿವರ **ಅನುಬಂಧ – 1** ರಲ್ಲಿ ನೀಡಲಾಗಿದೆ. |
| ಆ) | ಇಲ್ಲಿಯ ತನಕ ಈ ಯೋಜನೆಯಡಿ ಸದಸ್ಯತ್ವ ಹೊಂದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು: (ಜಿಲ್ಲಾವಾರು ಮಾಹಿತಿ ನೀಡುವುದು) | 2022-23ನೇ ಸಾಲಿನಲ್ಲಿ ಈ ಯೋಜನೆಯಡಿ 48.24 ಲಕ್ಷ ಫಲಾನುಭವಿಗಳು ನೋಂದಾಯಿಸಿಕೊಂಡಿರುತ್ತಾರೆ.<br><br>2023-24ನೇ ಸಾಲಿನಲ್ಲಿ 41.57 ಲಕ್ಷ ಫಲಾನುಭವಿಗಳು ನೋಂದಾಯಿಸಿಕೊಂಡಿದ್ದಾರೆ.<br><br>ಜಿಲ್ಲಾವಾರು ಮಾಹಿತಿ **ಅನುಬಂಧ–2** ರಲ್ಲಿ ನೀಡಲಾಗಿದೆ. |

| | | |
|---|---|---|
| ಇ) | ಈ ಯೋಜನೆಯಡಿಯಲ್ಲಿ ನೋಂದಣಿ ಮಾಡಿಕೊಂಡಿರುವ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳ ಸಂಖ್ಯೆ ಎಷ್ಟು; ಜಿಲ್ಲಾವಾರು ನೋಂದಣಿಯಾಗಿರುವ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳ ಪಟ್ಟಿ ಒದಗಿಸುವುದು) | ಯಶಸ್ವಿನಿ ಯೋಜನೆಯಡಿ ಇಲ್ಲಿಯವರೆಗೆ 700 ನೆಟ್ ವರ್ಕ್ ಆಸ್ಪತ್ರೆಗಳು ನೋಂದಣಿ ಆಗಿದ್ದು, ಈ ಪೈಕಿ 37 ಸರ್ಕಾರಿ ಆಸ್ಪತ್ರೆಗಳು ಹಾಗೂ 663 ಖಾಸಗಿ ಆಸ್ಪತ್ರೆಗಳು ಯೋಜನೆಯಡಿ ನೋಂದಣಿ ಮಾಡಿಕೊಂಡಿರುತ್ತವೆ.<br><br>ಆಸ್ಪತ್ರೆಗಳ ಪಟ್ಟಿಯನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ. |
| ಈ) | ಸದರಿ ಯೋಜನೆಯಡಿ ಇಲ್ಲಿಯವರೆಗೆ ಪ್ರಯೋಜನ ಪಡೆದುಕೊಂಡಿರುವ ಸದಸ್ಯರ ಸಂಖ್ಯೆ ಎಷ್ಟು ಮತ್ತು ಇದಕ್ಕಾಗಿ ಸರ್ಕಾರ ಒದಗಿಸಿರುವ ಮೊತ್ತವೆಷ್ಟು; ಯಶಸ್ವಿನಿ ಯೋಜನೆಯಡಿ ಯಾವ ಯಾವ ಖಾಯಿಲೆಗಳಿಗೆ ಚಿಕಿತ್ಸೆ ನೀಡಲು ಅವಕಾಶವಿದೆ ಸಂಪೂರ್ಣ ಮಾಹಿತಿ ಒದಗಿಸುವುದರೊಂದಿಗೆ ಸರ್ಕಾರದ ಅಧಿಸೂಚನೆ ಪಟ್ಟಿ ಒದಗಿಸುವುದು; | 2022-23ನೇ ಸಾಲಿನಲ್ಲಿ ನೋಂದಾಯಿಸಿದ ಸದಸ್ಯರ ಪೈಕಿ 66,279 ಫಲಾನುಭವಿಗಳು ಚಿಕಿತ್ಸೆ ಪಡೆದಿದ್ದು, ಚಿಕಿತ್ಸೆ ಬಾಬ್ತು 108.75 ಕೋಟಿ ಮೊತ್ತದ ಬಿಲ್ಲುಗಳನ್ನು ನೆಟ್‌ವರ್ಕ್ ಆಸ್ಪತ್ರೆಗಳಿಗೆ ಪಾವತಿ ಮಾಡಲಾಗಿದೆ. ಈ ಸಾಲಿಗೆ ಸರ್ಕಾರದಿಂದ ರೂ.100 ಕೋಟಿಗಳ ಅನುದಾನ ಬಿಡುಗಡೆಗೊಳಿಸಿದೆ.<br><br>2023-24ನೇ ಸಾಲಿನಲ್ಲಿ ಏಪ್ರಿಲ್ 2024 ರಿಂದ ಇಲ್ಲಿಯವರೆಗೆ 46,000 ಫಲಾನುಭವಿಗಳು ಚಿಕಿತ್ಸಾ ಬಾಬ್ತು ರೂ.82.31 ಕೋಟಿ ಮೊತ್ತದ ಚಿಕಿತ್ಸೆ ಪಡೆದಿದ್ದು, ಈ ಪೈಕಿ 23,527 ಫಲಾನುಭವಿಗಳ ಚಿಕಿತ್ಸಾ ಬಾಬ್ತು ರೂ.38.91 ಕೋಟಿ ಮೊತ್ತದ ಬಿಲ್ಲುಗಳನ್ನು ನೆಟ್‌ವರ್ಕ್ ಆಸ್ಪತ್ರೆಗಳಿಗೆ ಈಗಾಗಲೇ ಪಾವತಿಸಲಾಗಿದೆ. ಸದರಿ ಸಾಲಿಗೆ ಸರ್ಕಾರದಿಂದ ರೂ.31.28 ಕೋಟಿ ಅನುದಾನ ಬಿಡುಗಡೆಗೊಳಿಸಿದೆ.<br><br>ಯಶಸ್ವಿನಿ ಯೋಜನೆಯಡಿಯಲ್ಲಿ ಮುಖ್ಯವಾಗಿ ಹೃದಯಕ್ಕೆ ಸಂಬಂಧಿಸಿದ ರೋಗಗಳು ಕಿವಿ, ಮೂಗು, ಗಂಟಲು ವ್ಯಾದಿಗಳು, ಕರುಳಿನ ಖಾಯಿಲೆಗಳು, ನರಗಳಿಗೆ ಸಂಬಂಧಿಸಿದ ಖಾಯಿಲೆಗಳು, ಕಣ್ಣಿನ ಖಾಯಿಲೆಗಳು, ಮೂಳೆ ರೋಗಗಳು, ಹೆರಿಗೆ ಹಾಗೂ ಸ್ತ್ರೀಯರಿಗೆ ಸಂಬಂಧಿಸಿದ ಖಾಯಿಲೆಗಳು ಮತ್ತು ಈ ಯೋಜನೆಯಡಿ ಇತರೆ ಅನುಸೂಚಿತ ಸಾಮಾನ್ಯ ರೋಗಗಳಿಗೆ ಸಂಬಂಧಿಸಿದಂತೆ ಒಟ್ಟು 1650 ಚಿಕಿತ್ಸೆಗಳು ಮತ್ತು 478 **ICU** ಚಿಕಿತ್ಸೆಗಳೂ ಸೇರಿ ಒಟ್ಟು 2128 ಚಿಕಿತ್ಸಾ ಸೌಲಭ್ಯಗಳನ್ನು ರಾಜ್ಯದ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಒದಗಿಸಲಾಗುತ್ತಿದೆ.<br><br>ಚಿಕಿತ್ಸೆಗಳ ಪಟ್ಟಿಯನ್ನು **ಅನುಬಂಧ-4** ರಲ್ಲಿ ನೀಡಲಾಗಿದೆ. |

| | | |
|---|---|---|
| ಉ) | ಎಲ್ಲಾ ಮಾರಣಾಂತಿಕ ಖಾಯಿಲೆಗಳನ್ನು ಈ ಯೋಜನೆಯ ವ್ಯಾಪ್ತಿಗೆ ತಂದು ಯಶಸ್ವಿನಿ ಯೋಜನೆಯ ಸದಸ್ಯರಿಗೆ ಚಿಕಿತ್ಸೆಗೆ ಒಳಪಡಿಸಲು ಸರ್ಕಾರಕ್ಕೆ ತೊಂದರೆಯೇ: | ಈಗಾಗಲೇ ಸಾಮಾನ್ಯ ರೋಗಗಳಿಗೆ ಸಂಬಂಧಿಸಿದಂತೆ ಒಟ್ಟು 1650 ಚಿಕಿತ್ಸೆಗಳು ಮತ್ತು 478 ICU ಚಿಕಿತ್ಸೆಗಳೂ ಸೇರಿ ಒಟ್ಟು 2128 ಚಿಕಿತ್ಸಾ ಸೌಲಭ್ಯಗಳನ್ನು ರಾಜ್ಯದ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಒದಗಿಸಲಾಗುತ್ತಿದೆ.<br><br>ಮೂತ್ರಪಿಂಡ ಕಸಿ, ಡಯಾಲಿಸಿಸ್ ಇನ್ನು ಮುಂತಾದ ಕೆಲವು ಮಾರಣಾಂತಿಕ ಖಾಯಿಲೆಗಳನ್ನು ಯೋಜನೆ ವ್ಯಾಪ್ತಿಗೆ ತರಲು ಚಿಂತಿಸಲಾಗುತ್ತಿದೆ. |
| ಊ) | ಯಶಸ್ವಿನಿ ಯೋಜನೆಯನ್ನು ಜಾರಿಗೆ ನೀಡಲಾದ ದಿನಾಂಕದಿಂದ ಇಲ್ಲಿಯ ತನಕ ಸದರಿ ಯೋಜನೆಯ ಸದಸ್ಯರಿಂದ ಸಂಗ್ರಹವಾಗಿರುವ ಮೊತ್ತವೆಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು) | 2022-23 ನೇ ಸಾಲಿನಲ್ಲಿ ಯೋಜನೆಯಡಿ 48.24 ಲಕ್ಷ ಫಲಾನುಭವಿಗಳು ನೋಂದಾಯಿಸಿಕೊಂಡಿದ್ದಾರೆ. ಸದರಿ ಫಲಾನುಭವಿಗಳಿಂದ ಸಂಗ್ರಹಿಸಲಾದ ವಂತಿಕೆ ಮೊತ್ತ ರೂ.77.05 ಕೋಟಿಗಳಾಗಿರುತ್ತದೆ.<br><br>2023-24ನೇ ಸಾಲಿನಲ್ಲಿ ಯೋಜನೆಯಡಿ ಸುಮಾರು 41.57 ಲಕ್ಷ ಫಲಾನುಭವಿಗಳು ನೋಂದಾಯಿಸಿಕೊಂಡಿದ್ದು, ಸದರಿ ಫಲಾನುಭವಿಗಳಿಂದ ಸಂಗ್ರಹಿಸಲಾದ ವಂತಿಕೆ ಮೊತ್ತ ರೂ.47.76 ಕೋಟಿಗಳಾಗಿರುತ್ತದೆ.<br><br>ಜಿಲ್ಲಾವಾರು ಮಾಹಿತಿ **ಅನುಬಂಧ-5** ರಲ್ಲಿ ನೀಡಲಾಗಿದೆ. |

**ಸಂಖ್ಯೆ: ಸಿಒ 280 ಸಿಎಲ್‌ಎಸ್ 2024**

K. N. Rajanna

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**

# ಅನುಬಂಧ – 1

# ದೆಯೋದ್ದೇಶಗಳು

## ಸದಸ್ಯರಾಗಿ ನೊಂದಾಯಿಸಿಕೊಳ್ಳಲು ಅರ್ಹತೆಗಳು :

1. ಯಾವುದೇ ಸಹಕಾರ ಸಂಘದ ಕಾಯ್ದೆಯಡಿ ನೊಂದಾಯಿಸಿಕೊಂಡು ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವುದೇ ಸಹಕಾರ ಸಂಘದ (ಸೌಹಾರ್ದ, ಬಹುರಾಜ್ಯ ಕಾಯ್ದೆ, ಗ್ರಾಮೀಣ ಮತ್ತು ನಗರ ಸಹಕಾರ ಸಂಘಗಳು ಒಳಗೊಂಡಂತೆ) ಖಾಯಂ ಸದಸ್ಯರು, (ಸಹ ಸದಸ್ಯರು, ನಾಮ ಮಾತ್ರ ಸದಸ್ಯರಿಗೆ ಅವಕಾಶವಿರುವುದಿಲ್ಲ) ಸಹಕಾರಿ ಸ್ವ-ಸಹಾಯ ಗುಂಪುಗಳ ಸದಸ್ಯರು ಸದಸ್ಯರಾಗಿ ಮೂರು ತಿಂಗಳು ಪೂರ್ಣಗೊಂಡಿದ್ದಲ್ಲಿ ಅಂತಹ ಸದಸ್ಯರು ಮತ್ತು ಅವರ ಅರ್ಹ ಕುಟುಂಬ ಸದಸ್ಯರು ನಿಗದಿ ಪಡಿಸಿದ ವಾರ್ಷಿಕ ವಂತಿಗೆಯನ್ನು ಪಾವತಿಸಿ ಯಾವುದೇ ವಯೋಮಿತಿ ನಿರ್ಬಂಧ ವಿಲ್ಲದೇ ಯಶಸ್ವಿನಿ ಯೋಜನೆಯಡಿ ಸದಸ್ಯರಾಗಿ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.

2. 2023-24ನೇ ಸಾಲಿಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರಡಿ ನೊಂದಣಿಯಾಗಿ ಕಾರ್ಯನಿರತ ಸಹಕಾರ ಸಂಘಗಳಲ್ಲಿ ಕನಿಷ್ಠ ಮೂರು ವರ್ಷ ಸೇವೆ ಪೂರ್ಣಗೊಳಿಸಿ ಮಾಸಿಕ ರೂ.30,000/- ಮತ್ತು ಅದಕ್ಕಿಂತ ಕಡಿಮೆ ಒಟ್ಟು ವೇತನ ಪಡೆಯುತ್ತಿರುವ ಸಹಕಾರ ಸಂಘದ ನೌಕರರು ಮತ್ತು ಅವರ ಅರ್ಹ ಕುಟುಂಬ ಸದಸ್ಯರು ಯಶಸ್ವಿನಿ ಯೋಜನೆಯಡಿ ಸದಸ್ಯರಾಗಲು ಮತ್ತು ಸೌಲಭ್ಯ ಪಡೆಯಲು ಸರ್ಕಾರವು ಅವಕಾಶ ಕಲ್ಪಿಸಿದೆ. (ಮೂರು ವರ್ಷ ಸೇವೆ ಮತ್ತು ರೂ.30,000/- ಮತ್ತು ಅದಕ್ಕಿಂತ ಕಡಿಮೆ ಒಟ್ಟು ವೇತನ ಪಡೆಯುತ್ತಿರುವ ಬಗ್ಗೆ ಸಹಕಾರ ಸಂಘದ ಆಡಳಿತ ಮಂಡಳಿ ಅನುಮೋದನೆ ದೃಢೀಕರಣ ಪತ್ರ ಲಗತ್ತಿಸಬೇಕು)

3. ಸಮಾಪನೆಗೊಂಡಿರುವ ಮತ್ತು ನಿಷ್ಕ್ರಿಯಗೊಂಡಿರುವ ಸಹಕಾರ ಸಂಘಗಳು ಹಾಗೂ ನೌಕರರ ಸಹಕಾರ ಸಂಘಗಳ ಸದಸ್ಯರಿಗೆ (ನೌಕರರ ಪತ್ತಿನ ಸಹಕಾರ ಸಂಘಗಳು, ನೌಕರರ ಸಹಕಾರ ಬ್ಯಾಂಕುಗಳು, ನೌಕರರ ಗೃಹ ನಿರ್ಮಾಣ ಸಹಕಾರ ಸಂಘಗಳೂ ಸೇರಿದಂತೆ) ಈ ಯೋಜನೆ ಅನ್ವಯಿಸುವುದಿಲ್ಲ. ಪ್ರಧಾನ ಅರ್ಜಿದಾರರು ಮತ್ತು ಅವನ ಕುಟುಂಬದ ಯಾವುದೇ ಸದಸ್ಯನು ಸರ್ಕಾರಿ ನೌಕರರಾಗಿದ್ದಲ್ಲಿ ಯೋಜನೆಗೆ ಅರ್ಹರಿರುವುದಿಲ್ಲ. ಅದೇ ರೀತಿ ಒಬ್ಬ ವ್ಯಕ್ತಿ ಖಾಸಗಿ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಮಾಸಿಕ ರೂ.30,000/- ಕ್ಕಿಂತ ಹೆಚ್ಚು ಒಟ್ಟು ವೇತನ ಪಡೆಯುತ್ತಿದ್ದಲ್ಲಿ ಅಥವಾ ಒಬ್ಬ ವ್ಯಕ್ತಿ ಬೇರೆ ಯಾವುದೇ ಆರೋಗ್ಯ ವಿಮಾ ಯೋಜನೆಯಡಿಯಲ್ಲಿ ಸದಸ್ಯರಾಗಿದ್ದಲ್ಲಿ ಅಂತಹವರು ಯಶಸ್ವಿನಿ ಯೋಜನೆಯಡಿ ಸದಸ್ಯರಾಗಲು ಅರ್ಹರಿರುವುದಿಲ್ಲ. ಅಂತಹವರನ್ನು ಯಶಸ್ವಿನಿ ಯೋಜನೆಯ ಫಲಾನುಭವಿಯಾಗಿ ನೊಂದಾಯಿಸಬಾರದು. ಆದಾಗ್ಯೂ ಯಾವುದೇ ಕಾರಣಕ್ಕೆ ನೊಂದಾಯಿಸಿದಲ್ಲಿ ಅವರು ಯೋಜನೆ ಸೌಲಭ್ಯ ಪಡೆಯಲು ಅರ್ಹರಾಗುವುದಿಲ್ಲ. ಅಲ್ಲದೇ ಅಂತಹ ವ್ಯಕ್ತಿಗಳು ಪಾವತಿಸಿದ ವಂತಿಗೆಯನ್ನು ಮುಟ್ಟುಗೋಲು ಹಾಕಿ ಕೊಳ್ಳಲಾಗುವುದು.

4. ಯಶಸ್ವಿನಿ ಯೋಜನೆಯಲ್ಲಿನ ವ್ಯಾಖ್ಯಾನದಂತೆ "ಕುಟುಂಬ" ಎಂದರೆ ಪ್ರಧಾನ ಅರ್ಜಿದಾರರ (Principal Member) ತಂದೆ, ತಾಯಿ, ಗಂಡ/ಹೆಂಡತಿ, ಗಂಡು ಮಕ್ಕಳು ಮದುವೆಯಾಗದ ಹೆಣ್ಣು ಮಕ್ಕಳು, ಸೊಸೆಯಂದಿರು ಮತ್ತು ಮೊಮ್ಮಕ್ಕಳು (ಗಂಡು ಮಕ್ಕಳ ಮಕ್ಕಳು) ಎಂದು ಅರ್ಥೈಯಿಸುವುದು. ಒಂದು ಮನೆಯಲ್ಲಿ ಸೊಸೆ ಪ್ರಧಾನ ಅರ್ಜಿದಾರರಾಗಿದ್ದಲ್ಲಿ ಅವರ ಗಂಡನ ತಂದೆ/ತಾಯಿ ಅಂದರೆ ಅರ್ಜಿದಾರರ ಅತ್ತೆ/ಮಾವ ಅರ್ಹ ಸದಸ್ಯರಾಗುತ್ತಾರೆ. ಆದರೆ ಅರ್ಜಿದಾರರ ತಂದೆ/ತಾಯಿಯವರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಬರುವುದಿಲ್ಲ.

5. ಒಬ್ಬ ಯಶಸ್ವಿನಿ ಸದಸ್ಯ ಒಂದು ಅವಿಭಕ್ತ ಕುಟುಂಬದ ಸದಸ್ಯರಾಗಿದ್ದು, ಅವಿಭಕ್ತ ಕುಟುಂಬದ ಎಲ್ಲಾ ಸದಸ್ಯರಿಗೆ ಒಂದೇ ರೇಷನ್ ಕಾರ್ಡು ಹೊಂದಿದ್ದು, ಅದನ್ನು ಹಾಜರು ಪಡಿಸಿದಲ್ಲಿ ಅಂತಹ ರೇಷನ್ ಕಾರ್ಡ್‌ನಲ್ಲಿ ಹೆಸರು ನಮೂದಾಗಿರುವ ಅವಿಭಕ್ತ ಕುಟುಂಬದ ಎಲ್ಲಾ ಸದಸ್ಯರು (ಮದುವೆಯಾಗದ ಗಂಡಸರು/ಹೆಂಗಸರು) ವಾರ್ಷಿಕ ವಂತಿಗೆ ಪಾವತಿಸಿದ್ದಲ್ಲಿ ಅಂತಹ ಅವಿಭಕ್ತ ಕುಟುಂಬ ಸದಸ್ಯರಿಗೆ ಯೋಜನೆ ಸೌಲಭ್ಯ ಪಡೆಯಲು ಸರ್ಕಾರವು 2023-24ನೇ ಸಾಲಿನಿಂದ ಅವಕಾಶ ಕಲ್ಪಿಸಿದೆ. ಕುಟುಂಬದ ಎಲ್ಲಾ ಸದಸ್ಯರಿಗೆ ಒಂದೇ ರೇಷನ್ ಕಾರ್ಡ್ ಇಲ್ಲದಿದ್ದಲ್ಲಿ ಅವಕಾಶವಿರುವುದಿಲ್ಲ.

6. ಮದುವೆಯಾಗಿರುವ ಹೆಣ್ಣು ಮಗಳು ಹಾಗೂ ಅವಳ ಮಕ್ಕಳು ಅವರ ತವರು ಮನೆಯಲ್ಲಿಯೇ ಅಂದರೆ ಅವರ ತಂದೆ/ತಾಯಿ/ಅಣ್ಣ/ತಮ್ಮ/ ಪ್ರಧಾನ ಅರ್ಜಿದಾರರ ಕುಟುಂಬದಲ್ಲಿಯೇ ಯಾವುದೇ (ವಿಧವೆ/ವಿಚ್ಛೇದನೆ/ಬೇರ್ಪಟ್ಟಿರುವುದು ಇತ್ಯಾದಿ) ಕಾರಣಗಳಿಗೆ ವಾಸವಾಗಿದ್ದರೆ ಮತ್ತು ಅವರ ವಂತಿಗೆಯನ್ನು ಪ್ರಧಾನ ಅರ್ಜಿದಾರರು ಪಾವತಿಸಿದ್ದರೆ ಈ ಯೋಜನೆ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.

7. ಪ್ರಸಕ್ತ ಸಾಲಿನ ಯೋಜನೆಯ ಅವಧಿಯಲ್ಲಿ ಮದುವೆಯಾಗಿ ಗಂಡನ ಮನೆಯಲ್ಲಿರುವಂತಹ ಹೆಣ್ಣು ಮಕ್ಕಳಿಗೆ ತವರು ಮನೆಯ ಕಾರ್ಡಿನ ಮೇಲೆ ಆ ವರ್ಷದ ವಾರ್ಷಿಕ ವಂತಿಗೆ ಪಾವತಿಸಿ ಸದಸ್ಯರನ್ನಾಗಿ ನೊಂದಣಿ ಮಾಡಬಾರದು. ಆದರೆ ನೊಂದಣಿ ಮಾಡಿದ ನಂತರ ಮದುವೆಯಾದಲ್ಲಿ ಆ ವರ್ಷದಲ್ಲಿ ಮಾತ್ರ ಯೋಜನೆಯ ಸೌಲಭ್ಯ ಪಡೆಯಬಹುದು.

8. ನವಜಾತ ಶಿಶುವು ತಾಯಿ ಹೆಸರು ಇರುವ ಯಶಸ್ವಿನಿ ಕಾರ್ಡ್‌ನ ಆಧಾರದ ಮೇಲೆ ಈ ಯೋಜನೆಯಡಿಯಲ್ಲಿ ಸೌಲಭ್ಯವನ್ನು ಮುಂದಿನ ವರ್ಷ ನೊಂದಣಿಯಾಗುವ ವರೆವಿಗೆ ಪಡೆಯಬಹುದು. ನಂತರಲ್ಲಿ ಮಗುವಿನ ಹೆಸರನ್ನು ನೊಂದಾಯಿಸಿಕೊಂಡು ಯೋಜನೆಯ ಸೌಲಭ್ಯ ಪಡೆಯಬಹುದು.

9. ಮೇಲೆ ವಿವರಿಸಿರುವಂತೆ ಅರ್ಹ ಸದಸ್ಯರನ್ನು ಹೊರತುಪಡಿಸಿ ಬೇರೆ ಯಾವುದೇ ಸದಸ್ಯರನ್ನು ಯಶಸ್ವಿನಿ ಯೋಜನೆಗೆ ಸೇರಿಸುವಂತಿಲ್ಲ. ಒಂದು ವೇಳೆ ಸುಳ್ಳು ಮಾಹಿತಿ ನೀಡಿ ಅಕ್ರಮವಾಗಿ ಅರ್ಜಿದಾರ ಅಥವಾ ಸಹಕಾರ ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿಯ ತಪ್ಪಿನಿಂದಾಗಲಿ ಅರ್ಹರಲ್ಲದ ಸದಸ್ಯರಿಂದ ವಂತಿಗೆ ಪಾವತಿಸಿಕೊಂಡು ಅಂತಹ ವ್ಯಕ್ತಿಗಳನ್ನು ಗೊತ್ತಿದ್ದೋ ಅಥವಾ ಗೊತ್ತಿಲ್ಲದೆಯೋ ನೊಂದಣಿ ಮಾಡಿದ್ದರೂ ಸಹ ಅಂತಹ ವ್ಯಕ್ತಿಗಳು ಯೋಜನೆಯ ಸೌಲಭ್ಯ ಪಡೆಯಲು ಅರ್ಹರಾಗುವುದಿಲ್ಲ ಹಾಗೂ ಅಂತಹ ವ್ಯಕ್ತಿಗಳು ಪಾವತಿಸಿದ ವಂತಿಗೆ ಹಣವನ್ನು ಮುಟ್ಟುಗೋಲು ಹಾಕಿ ಕೊಳ್ಳಲಾಗುವುದು ಮತ್ತು ಅವರ ಯಶಸ್ವಿನಿ ಸದಸ್ಯತ್ವ ತಂತಾನೇ ರದ್ದುಗೊಳ್ಳುತ್ತದೆ. ಪ್ರತ್ಯೇಕ ರದ್ದತಿ ಆದೇಶ ಅವಶ್ಯಕತೆ ಇರುವುದಿಲ್ಲ.

10. ನೊಂದಣಿ ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ಮಾಹಿತಿಯನ್ನು ಅರ್ಜಿದಾರರು ನೀಡತಕ್ಕದ್ದು ಮತ್ತು ಎಲ್ಲಾ ವಿವರಗಳನ್ನು/ಕಾಲಂಗಳನ್ನು ಸ್ಪಷ್ಟವಾಗಿ, ಪೂರ್ಣವಾಗಿ, ಕಡ್ಡಾಯವಾಗಿ ಸಂಘದವರು ತುಂಬಬೇಕು. ಅರ್ಜಿಯಲ್ಲಿ ನೀಡಿರುವ ಮಾಹಿತಿಯನ್ನು ಗಣಕೀಕರಣ ಮಾಡಲಾಗುತ್ತಿದೆ. ಒಂದು ವೇಳೆ ಅಪೂರ್ಣ ಮಾಹಿತಿ ಇದ್ದಲ್ಲಿ ಅಂಥವರಿಗೆ ಚಿಕಿತ್ಸೆಯನ್ನು ನೀಡಲು ವಿಳಂಭವಾಗುತ್ತದೆ. ಅಪೂರ್ಣ/ಅಸ್ಪಷ್ಟ ಮಾಹಿತಿ ಇರುವ ಗುರುತಿನ ಚೀಟಿಗಳನ್ನು ಚಿಕಿತ್ಸೆ ವೇಳೆಯಲ್ಲಿ ತಿರಸ್ಕರಿಸಲಾಗುವುದು.

11. 2023-24ನೇ ಸಾಲಿಗೆ ಈ ಯೋಜನೆಯಡಿ

(ಎ) ಗ್ರಾಮೀಣ ಸಹಕಾರ ಸಂಘಗಳ/ಸ್ವ-ಸಹಾಯ ಗುಂಪುಗಳ ಗರಿಷ್ಠ ನಾಲ್ಕು ಸದಸ್ಯರ ಕುಟುಂಬ ಒಂದಕ್ಕೆ ವಾರ್ಷಿಕ ರೂ.500/-ಗಳ ವಂತಿಗೆ ಮತ್ತು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರುಳ್ಳ ಕುಟುಂಬದ ಪ್ರತಿಯೊಬ್ಬ ಹೆಚ್ಚುವರಿ ಸದಸ್ಯರಿಗೆ ರೂ.100/-ಗಳನ್ನು ಪಾವತಿಸತಕ್ಕದ್ದು.

(ಬಿ) ನಗರ ಸಹಕಾರ ಸಂಘಗಳ ಗರಿಷ್ಠ ನಾಲ್ಕು ಸದಸ್ಯರ ಕುಟುಂಬ ಒಂದಕ್ಕೆ ವಾರ್ಷಿಕ ರೂ.1000/-ಗಳ ವಂತಿಗೆ ಮತ್ತು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರುಳ್ಳ ಕುಟುಂಬದ ಪ್ರತಿಯೊಬ್ಬ ಹೆಚ್ಚುವರಿ ಸದಸ್ಯರಿಗೆ ರೂ.200/-ಗಳನ್ನು ಪಾವತಿಸತಕ್ಕದ್ದು.

(ಸಿ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರುಗಳಿಗೆ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪ ಯೋಜನೆಯಡಿ ಸಹಾಯ ಧನ ನೀಡುವ ಮೂಲಕ ಅವರ ವಾರ್ಷಿಕ ಸದಸ್ಯತ್ವದ ವಂತಿಗೆಯನ್ನು ಸರ್ಕಾರವೇ ಭರಿಸುತ್ತದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸದಸ್ಯರ ವಿವರಗಳನ್ನು ಕಡ್ಡಾಯವಾಗಿ ಸರ್ಕಾರಕ್ಕೆ ಸಲ್ಲಿಸಬೇಕಾಗಿರುವುದರಿಂದ ಈ ಸಮುದಾಯಗಳಿಗೆ ಸಂಬಂಧಿಸಿದಂತೆ ಜಾತಿ ಪ್ರಮಾಣ ಪತ್ರದಲ್ಲಿರುವ RD ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು. ಇಲ್ಲದಿದ್ದಲ್ಲಿ ಸರ್ಕಾರದಿಂದ ಅನುದಾನದ ಸೌಲಭ್ಯ ದೊರೆಯುವುದಿಲ್ಲ.

(ಡಿ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರಿಂದ ಯಾವುದೇ ವಂತಿಗೆಯನ್ನು ಪಾವತಿಸಿಕೊಳ್ಳದಿರುವುದರಿಂದ ಈ ಸಮುದಾಯದ ಸದಸ್ಯರನ್ನು ಒಂದೇ ಬಾರಿ ಮೂರು ವರ್ಷಗಳ ಅವಧಿಗೆ ನೊಂದಾಯಿಸಿಕೊಂಡು ಅದರಂತೆ ಮೂರು ವರ್ಷಗಳ ಅವಧಿಗೆ ಕಾರ್ಡುಗಳನ್ನು ವಿತರಿಸಲಾಗುವುದು. ಮುಂದಿನ ವರ್ಷಗಳಲ್ಲಿ ಸದರಿ ಕಾರ್ಡುಗಳಲ್ಲಿ ಯಾವುದೇ ತಿದ್ದುಪಡಿ/ಬದಲಾವಣೆ ಹಾಗೂ ಹೊಸ ಸದಸ್ಯರ ಸೇರ್ಪಡೆ/ತೆಗೆದು ಹಾಕುವುದು ಇದ್ದಲ್ಲಿ ಅದರಂತೆ ಪ್ರತಿ ವರ್ಷ ಕ್ರಮವಿಡಲಾಗುವುದು. ಪ್ರತಿ ವರ್ಷ ಆ ಸಮುದಾಯದ ಸದಸ್ಯರ ವಂತಿಗೆಯನ್ನು ಸರ್ಕಾರದಿಂದ ಕ್ಲೇಂ ಮಾಡಲಾಗುವುದು.

(ಇ) ಸದಸ್ಯರಿಂದ ಸಂಗ್ರಹಿಸಿದ ವಂತಿಗೆ ಪೈಕಿ (ಸದಸ್ಯರಿಂದ ಇದಕ್ಕಾಗಿ ಹೆಚ್ಚುವರಿ ಮೊತ್ತ ಸಂಗ್ರಹಿಸ ತಕ್ಕದ್ದಲ್ಲ) ಪ್ರತಿ ಕಾರ್ಡಿಗೆ ರೂ.25/- ಗಳನ್ನು ಸಹಕಾರ ಸಂಘಗಳು ಪ್ರೋತ್ಸಾಹ ಧನವಾಗಿ ಇಟ್ಟುಕೊಂಡು ಉಳಿದ ಮೊತ್ತವನ್ನು ಸದಸ್ಯತ್ವ ನೊಂದಣಿಯಾದ ಏಳು ದಿನಗಳೊಳಗಾಗಿ ಸಂಬಂಧಿಸಿದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಯಶಸ್ವಿನಿ ಟ್ರಸ್ಟ್ ಹೊಂದಿರುವ ಖಾತೆಗೆ ಜಮಾ ಮಾಡತಕ್ಕದ್ದು. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಜಮಾ ಆಗಿರುವ ವಂತಿಗೆ ಮೊತ್ತವನ್ನು ಸ್ವೀಕರಿಸಿದ 7 ದಿನದೊಳಗಾಗಿ ಅಪೆಕ್ಸ್ ಬ್ಯಾಂಕ್‌ನ ಕೇಂದ್ರ ಕಛೇರಿಯಲ್ಲಿ ಹೊಸದಾಗಿ ತೆರೆದಿರುವ ಯಶಸ್ವಿನಿ ಟ್ರಸ್ಟ್‌ನ ಉಳಿತಾಯ ಖಾತೆಗೆ ಜಮಾ ಮಾಡತಕ್ಕದ್ದು/ವರ್ಗಾಯಿಸತಕ್ಕದ್ದು.

(ಎಫ್) ವಿಳಂಬವಾದಲ್ಲಿ ಆ ಹಣವನ್ನು ಇಟ್ಟುಕೊಂಡ ಸಹಕಾರಿ ಸಂಘ/ಸಂಸ್ಥೆಯವರು ಬ್ಯಾಂಕಿಂಗ್ ನಿಯಮಗಳ ಪ್ರಕಾರ ಬಡ್ಡಿ ಪಾವತಿಮಾಡಲು ಬದ್ಧರಾಗಿರುತ್ತಾರೆ. ಸದಸ್ಯರನ್ನು ನೊಂದಾಯಿಸಿರುವ ಸಹಕಾರ ಸಂಘ/ಬ್ಯಾಂಕುಗಳು ಸದಸ್ಯರಿಂದ ಸಂಗ್ರಹಿಸಿದ ವಂತಿಗೆಯನ್ನು ಆ ಜಿಲ್ಲೆಯ ಡಿಸಿಸಿ ಬ್ಯಾಂಕು ಮೂಲಕವೇ ಸಂದಾಯ ಮಾಡಬೇಕು. ಯಾವುದೇ ಕಾರಣಕ್ಕೆ ನೇರವಾಗಿ ಅಪೆಕ್ಸ್ ಬ್ಯಾಂಕಿನಲ್ಲಿರುವ ಟ್ರಸ್ಟ್ ಖಾತೆಗೆ ಪಾವತಿಸತಕ್ಕದಲ್ಲ.

(ಜಿ) ಸದಸ್ಯರಿಂದ ಅಗತ್ಯ ದಾಖಲೆಗಳು ಫೋಟೋ ಸಹಿತ ಸಂಪೂರ್ಣ ವಿವರಗಳು, ವಾರ್ಷಿಕ ವಂತಿಗೆ ಸಂದಾಯವಾದ ನಂತರವೇ ಸಂಪೂರ್ಣವಾಗಿ ತುಂಬಿದ ಫಾರಂಗಳನ್ನು Scanning ಗೆ ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಹಣಾಧಿಕಾರಿ, ತಾಲ್ಲೂಕು CDO ಗೆ ಸಲ್ಲಿಸತಕ್ಕದ್ದು. ತಾಲ್ಲೂಕು CDO ರವರು ಅರ್ಜಿ ಫಾರಂನಲ್ಲಿ ಸಂಪೂರ್ಣ ವಿವರಗಳನ್ನು ಭರ್ತಿಮಾಡಿರುವ ಬಗ್ಗೆ ಖಾತರಿ ಪಡಿಸಿಕೊಂಡ ನಂತರವೇ CDO ರವರು ದೃಢೀಕರಿಸಿ Scanning ಗೆ ವ್ಯವಸ್ಥೆ ಮಾಡತಕ್ಕದ್ದು.

12. 2023-24ನೇ ಸಾಲಿಗೆ ಸದಸ್ಯತ್ವ ನೊಂದಣಿ ಜನವರಿ 2024 ರಲ್ಲಿ ಪ್ರಾರಂಭವಾಗಿದೆ.

13. 2023-24ನೇ ಸಾಲಿನಲ್ಲಿ ನೊಂದಣಿಯಾದವರಿಗೆ ಚಿಕಿತ್ಸಾ ಅವಧಿಯನ್ನು ಏಪ್ರಿಲ್ 2024 ರಿಂದ ಮಾರ್ಚ್ 2025 ರವರೆವಿಗೆ ನಿಗದಿಗೊಳಿಸಿದೆ.

**ಯಶಸ್ವಿನಿ ಯೋಜನೆಯ ಷರತ್ತು ಮತ್ತು ನಿಬಂಧನೆಗಳು ಹಾಗೂ ಚಿಕಿತ್ಸಾ ಸೌಲಭ್ಯಗಳು :**

14. "ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಯೋಜನೆ"ಯು ವಿಮಾ ಯೋಜನೆಯಲ್ಲ ಇದು ಒಂದು ಸ್ವಯಂನಿಧಿ ಚಿಕಿತ್ಸಾ ಯೋಜನೆ.

15. ಈ ಕೆಳಕಂಡ ಸೌಲಭ್ಯಗಳನ್ನು ಯಶಸ್ವಿನಿ ಸದಸ್ಯರಿಗೆ ಒದಗಿಸಲಾಗುವುದು.

ಎ) ಪ್ರಸ್ತುತ ಯಶಸ್ವಿನಿ ಯೋಜನೆಯಡಿಯಲ್ಲಿ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಲ್ಲಿನ ಚಿಕಿತ್ಸೆಗಳ ಪೈಕಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿರುವ/ಪ್ರಕಟಿಸಲಾಗುವ ಯಶಸ್ವಿನಿ ಟ್ರಸ್ಟ್ ಗುರ್ತಿಸಿ ಅಳವಡಿಸಿಕೊಂಡಿರುವ 1650 ಚಿಕಿತ್ಸೆಗಳು ಮತ್ತು 478 ICU ಚಿಕಿತ್ಸೆಗಳೂ ಸೇರಿ ಒಟ್ಟು 2128 ಚಿಕಿತ್ಸೆಗಳನ್ನು ಯಶಸ್ವಿನಿ ಯೋಜನೆಗೆ ಅಳವಡಿಸಿಕೊಳ್ಳಲಾಗಿದೆ. ಟ್ರಸ್ಟ್ ಗುರ್ತಿಸಿದ ಚಿಕಿತ್ಸೆಗಳನ್ನು ಷರತ್ತಿಗಳೊಳಪಟ್ಟು ರಾಜ್ಯಾದ್ಯಂತ ಟ್ರಸ್ಟ್‌ನಿಂದ ಅಂಗೀಕರಿಸಲ್ಪಟ್ಟ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿರುವ/ಪ್ರಕಟಿಸಲಾಗುವ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಮಾತ್ರ ಯೋಜನೆಯಡಿ ಚಿಕಿತ್ಸಾ ಸೌಲಭ್ಯ ಪಡೆಯಬಹುದು.

ಬಿ) ಯೋಜನೆಯಲ್ಲಿ ಒಳಪಡದ ಚಿಕಿತ್ಸೆಗಳ ಮತ್ತು ಟ್ರಸ್ಟ್ ಅಂಗೀಕರಿಸದ ಆಸ್ಪತ್ರೆಗಳಲ್ಲಿ ಪಡೆದಂತಹ ಚಿಕಿತ್ಸೆಗಳಿಗೆ ಯಶಸ್ವಿನಿ ಟ್ರಸ್ಟ್ ಜವಾಬ್ದಾರರಾಗುವುದಿಲ್ಲ ಹಾಗೂ ಯಾವುದೇ ಕಾರಣಕ್ಕೂ ಆಸ್ಪತ್ರೆಗಳಿಗಾಗಲಿ ಅಥವಾ ಫಲಾನುಭವಿಗಳಿಗಾಗಲಿ ಚಿಕಿತ್ಸಾ ವೆಚ್ಚವನ್ನು ಪಾವತಿಸಲಾಗುವುದಿಲ್ಲ. ಯಶಸ್ವಿನಿ ಪ್ರೋಟೋಕಾಲ್‌ನಂತೆ ನಿಗದಿಪಡಿಸಿರುವ ಅರ್ಹ ಚಿಕಿತ್ಸೆಗಳ ಪ್ಯಾಕೇಜಿನ ದರದ ಮಿತಿಗೆ ಒಳಪಟ್ಟು ಫಲಾನುಭವಿ ಕುಟುಂಬದ ವಾರ್ಷಿಕ ವೈದ್ಯಕೀಯ ಚಿಕಿತ್ಸೆಯ ವೆಚ್ಚದ ಗರಿಷ್ಠ ಮಿತಿ ರೂ.5.00 ಲಕ್ಷ ಇರುತ್ತದೆ.

ಸಿ) ಎರಡು ಜೀವಂತ ಮಕ್ಕಳು ಅಥವಾ ಎರಡು ಹೆರಿಗೆಗೆ ಮಾತ್ರ ಯಶಸ್ವಿನಿ ಯೋಜನೆಯಲ್ಲಿ ಸೌಲಭ್ಯ ದೊರೆಯುತ್ತದೆ.

ಡಿ) ಯಶಸ್ವಿನಿ ಯೋಜನೆಯ ಪ್ರೋಟೋಕಾಲ್ ಪ್ರಕಾರ ಯಶಸ್ವಿನಿ ಫಲಾನುಭವಿಗಳು ಜನರಲ್ ವಾರ್ಡ್‌ನಲ್ಲಿ ಮಾತ್ರ ಚಿಕಿತ್ಸೆ ಪಡೆಯಲು ಅರ್ಹರಿರುತ್ತಾರೆ. ಒಂದು ವೇಳೆ ಯೋಜನೆಯಡಿ ನಿಗದಿಪಡಿಸಿರುವ ಜನರಲ್ ವಾರ್ಡ್‌ಗೆ ಬದಲಾಗಿ ಉನ್ನತ ವಾರ್ಡ್ (Semi Special Ward or Special Ward) ನಲ್ಲಿ ಚಿಕಿತ್ಸೆ ಪಡೆಯಲು ಇಚ್ಚಿಸಿದಲ್ಲಿ ಸದರಿ ಫಲಾನುಭವಿಗಳಿಗೆ ಯೋಜನೆಯಡಿ ನಿಗದಿ ಪಡಿಸಿರುವಂತೆ ಜನರಲ್ ವಾರ್ಡ್‌ಗೆ ಅನ್ವಯಿಸುವ ಚಿಕಿತ್ಸೆಯ ದರದ ಮೊತ್ತವನ್ನು ಮಾತ್ರ ಯೋಜನೆಯಡಿ ಟ್ರಸ್ಟ್‌ನಿಂದ ಭರಿಸಲಾಗುವುದು. ಉನ್ನತ ವಾರ್ಡ್‌ಗೆ/ಸ್ಪೆಷಲ್ ವಾರ್ಡ್‌ಗೆ ಆಗುವ ವ್ಯತ್ಯಾಸದ ಮೊತ್ತವನ್ನು ಸದರಿ ಫಲಾನುಭವಿಗಳೇ ಭರಿಸಬೇಕು.

ಇ) ಸ್ಪೆಷಲ್ ವಾರ್ಡ್‌ನ್ನು ಯಶಸ್ವಿನಿ ಸದಸ್ಯರು ಸ್ವ-ಇಚ್ಚೆಯಿಂದ ಬಯಸಿದಲ್ಲಿ ಮಾತ್ರ ಅವರಿಂದ ಲಿಖಿತ ಮೂಲಕ ಬರೆಯಿಸಿಕೊಂಡು ಸ್ಪೆಷಲ್ ವಾರ್ಡ್ ನೀಡಬೇಕು. ಬಲವಂತವಾಗಿ ನೆಟ್‌ವರ್ಕ್ ಆಸ್ಪತ್ರೆಗಳು ಯಶಸ್ವಿನಿ ಸದಸ್ಯರನ್ನು ಸ್ಪೆಷಲ್ ವಾರ್ಡ್‌ಗೆ ದಾಖಲು ಮಾಡತಕ್ಕದಲ್ಲ.

ಎಫ್) ಆಸ್ಪತ್ರೆಗಳು, ಸ್ಪೆಷಲ್ ವಾರ್ಡ್ ಉಪಯೋಗಿಸಿದ ಫಲಾನುಭವಿಗೆ ಕ್ಲೇಂ ಮಾಡುವ ಬಿಲ್ಲಿನಲ್ಲಿ ಯೋಜನೆಯ ಪ್ಯಾಕೇಜ್‌ನಲ್ಲಿ ಬರುವ ಮೊತ್ತವನ್ನು ಕಳೆದು ಆಸ್ಪತ್ರೆಗಳು ಸ್ಪೆಷಲ್ ವಾರ್ಡ್‌ಗೆ ವಿಧಿಸುವ ದರದಲ್ಲಿ ಬಿಲ್ಲು ಮಾಡಿ, ಹೆಚ್ಚುವರಿ ವ್ಯತ್ಯಾಸದ ಮೊತ್ತವನ್ನು ಫಲಾನುಭವಿಗಳಿಂದ ವಸೂಲಿ ಮಾಡಿಕೊಳ್ಳಲು ಅವಕಾಶ ವಿರುತ್ತದೆ.

ಜಿ) ಆಸ್ಪತ್ರೆಗಳು ಅವುಗಳು ವಿಧಿಸುವ ಸ್ಪೆಷಲ್ ವಾರ್ಡ್‌ಗಳ ದರ (Package)ವನ್ನು ಯಶಸ್ವಿನಿ ಕೌಂಟರ್‌ನಲ್ಲಿ ಮತ್ತು ಆಸ್ಪತ್ರೆಯ ಮುಖ್ಯ ಸ್ಥಳಗಳಲ್ಲಿ ಬೋರ್ಡ್ ಬರೆಯಿಸಿ ಹಾಕಬೇಕು.

ಹೆಚ್) ಯಶಸ್ವಿನಿ ಯೋಜನೆಯ ಪ್ಯಾಕೇಜಿನಲ್ಲಿ Implants ಅಗತ್ಯವಿರುವ ಕಡೆ Implants ದರವನ್ನು ಒಳಗೊಂಡಿರುತ್ತದೆ. (Ex. Knee replacement, lens in cataract surgery) ಒಂದು ವೇಳೆ ಫಲಾನುಭವಿಗಳು ಉನ್ನತ Implants ಅಥವಾ lens ಪಡೆಯಲು ಸ್ವ-ಇಚ್ಛೆಯಿಂದ ಲಿಖಿತ ಮೂಲಕ ಒಪ್ಪಿಗೆ ಸೂಚಿಸಿದಲ್ಲಿ, ಅಂತಹ ಉನ್ನತ Implants ಮತ್ತು lens ಗೆ ತಗಲುವ ವ್ಯತ್ಯಾಸದ ಹೆಚ್ಚುವರಿ ಮೊತ್ತವನ್ನು ಅಂತಹ ಫಲಾನುಭವಿಗಳೇ ಭರಿಸಿ ಚಿಕಿತ್ಸೆಯನ್ನು ಪಡೆಯತಕ್ಕದ್ದು.

ಐ) ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಯಶಸ್ವಿನಿ ಸದಸ್ಯರಿಗೆ ಹೊರ ರೋಗಿ ಚಿಕಿತ್ಸೆಗೆ (OPD) ಗರಿಷ್ಠ ರೂ.200/-ಗಳನ್ನು (ಮೂರು ತಿಂಗಳ ಅವಧಿಗೆ) ಮಿತಿ ನಿಗಧಿಪಡಿಸಿದ್ದು, ಈ ಪೈಕಿ ರೂ.100/-ಗಳನ್ನು ಯಶಸ್ವಿನಿ ಟ್ರಸ್ಟ್ ವತಿಯಿಂದ ಪಾವತಿಸಲಾಗುವುದು.

ಜೆ) ಕಾರ್ಡ್ ಪಡೆದ ಹದಿನೈದು (15) ದಿನಗಳ ನಂತರ ಯಶಸ್ವಿನಿ ಕಾರ್ಡುದಾರರು ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಅರ್ಹರಾಗಿರುತ್ತಾರೆ.

**<u>ಯೋಜನೆ ಬಗ್ಗೆ ತಿಳುವಳಿಕೆ, ಪ್ರಚಾರ ಮತ್ತು ವ್ಯವಸ್ಥಿತ ಅನುಷ್ಠಾನಕ್ಕೆ ಕೈಗೊಳ್ಳಬೇಕಾದ ಕ್ರಮಗಳು.</u>**

16. ಸದಸ್ಯರ ನೋಂದಣಿಗೆ ಮಾರ್ಗಸೂಚಿಗಳು, ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳ ಯಾದಿ, ಶಸ್ತ್ರಚಿಕಿತ್ಸೆಗಳ ಯಾದಿ ಇವುಗಳನ್ನು ಸಹಕಾರ ಇಲಾಖೆಯ ಸಹಕಾರ ಸಿಂಧು ವೆಬ್‌ಸೈಟ್‌ನಲ್ಲಿ/ಟ್ರಸ್ಟ್‌ನ ವೆಬ್‌ಸೈಟ್‌ನಲ್ಲೂ ಅಪ್‌ಲೋಡ್ ಮಾಡಲಾಗುವುದು.

17. ಸದಸ್ಯರು ಕಡ್ಡಾಯವಾಗಿ ಮೊಬೈಲ್ ಸಂಖ್ಯೆ ಮತ್ತು ಆಧಾರ್ ಕಾರ್ಡ್‌ನ್ನು ಒದಗಿಸತಕ್ಕದ್ದು.

18. ಯಶಸ್ವಿನಿ ಯೋಜನೆಯ ಮಾರ್ಗಸೂಚಿಗಳ ಬಗ್ಗೆ ತಿಳುವಳಿಕೆ ನೀಡಲು ಆಯಾ ಪ್ರಾಂತ್ಯದ ಸಹಕಾರ ಸಂಘಗಳ ಜಂಟಿ ನಿಬಂಧಕರು ಅವರ ವ್ಯಾಪ್ತಿಯ ಇಲಾಖಾಧಿಕಾರಿಗಳ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ, ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಗಳ ಮತ್ತು ಇತರೆ ಪ್ರಮುಖ ಸಹಕಾರ ಸಂಘ/ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯನ್ನು ಪ್ರಾಂತೀಯ ಮಟ್ಟದಲ್ಲಿ ನಿರ್ವಹಿಸುವುದು. ನಂತರ ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು, ಅವರ ಜಿಲ್ಲೆಯ ಸಹಕಾರ ಸಂಘಗಳ ಅಧ್ಯಕ್ಷರ, ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಮತ್ತು ಸಂಬಂಧಿಸಿದ ಇಲಾಖಾಧಿಕಾರಿಗಳ ಸಭೆ ಕರೆದು ಕಾರ್ಯಗಾರ ಏರ್ಪಡಿಸಿ ಯೋಜನೆಯ ಮಾರ್ಗಸೂಚಿ ನಿಯಮಗಳು, ಇತಿಮಿತಿಗಳು ಮತ್ತು ಯೋಜನೆಯಡಿ ಸೌಲಭ್ಯದ ವಿವರಗಳ ಮಾಹಿತಿ ನೀಡಿ, ಯೋಜನೆ ವ್ಯವಸ್ಥಿತವಾಗಿ ಅನುಷ್ಠಾನಗೊಳಿಸಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು. ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ನಿಬಂಧಕರಿಗೆ ಮತ್ತು ಸರ್ಕಾರಕ್ಕೆ ಸಲ್ಲಿಸುವುದು.

**<u>ಚಿಕಿತ್ಸಾ ಸೌಲಭ್ಯ ಪಡೆಯಲು ಅನುಸರಿಸಬೇಕಾದ ಕ್ರಮಗಳು:</u>**

19. ಯೋಜನೆಯಲ್ಲಿ ನೋಂದಾಯಿತ ಯಶಸ್ವಿನಿ ಸದಸ್ಯರಿಗೆ ಯುನಿಕ್ ಐಡಿ ಸಂಖ್ಯೆ ಹೊಂದಿರುವ ಗುರುತಿನ ಚೀಟಿಯನ್ನು ನೀಡಲಾಗುವುದು. ಈ ಗುರುತಿನ ಚೀಟಿಯನ್ನು ಹಾಜರುಪಡಿಸಿ ಚಿಕಿತ್ಸೆಯನ್ನು ಪಡೆಯಬಹುದು. ಗುರುತಿನ ಚೀಟಿಯನ್ನು ಚಿಕಿತ್ಸೆಗಾಗಿ ನೆಟ್‌ವರ್ಕ್ ಆಸ್ಪತ್ರೆಗಳಿಗೆ ಭೇಟಿಯ ಸಮಯದಲ್ಲಿ ಯಶಸ್ವಿನಿ ಸದಸ್ಯರು ಕಡ್ಡಾಯವಾಗಿ ಹಾಜರುಪಡಿಸಬೇಕು. ಇಲ್ಲದಿದ್ದಲ್ಲಿ ನೆಟ್‌ವರ್ಕ್ ಆಸ್ಪತ್ರೆಗಳು ಯಶಸ್ವಿನಿ ಯೋಜನೆಯಡಿ ಚಿಕಿತ್ಸೆಯನ್ನು ನಿರಾಕರಿಸುತ್ತವೆ. ಇಂತಹ ಪ್ರಕರಣಗಳಿಗೆ ಯಶಸ್ವಿನಿ ಟ್ರಸ್ಟ್ ಜವಾಬ್ದಾರಿಯಾಗುವುದಿಲ್ಲ.

20. ಆಸ್ಪತ್ರೆಯ ವೈದ್ಯಾಧಿಕಾರಿಗಳು ಫಲಾನುಭವಿಗಳ ಆರೋಗ್ಯ ತಪಾಸಣೆ ಮಾಡಿ ಚಿಕಿತ್ಸೆ ಅವಶ್ಯವೆಂದು ಕಂಡುಬಂದಲ್ಲಿ ಮತ್ತು ಸದರಿ ಚಿಕಿತ್ಸೆಯು ಯೋಜನೆಯ ಪ್ಯಾಕೇಜ್‌ನಲ್ಲಿ ಒಳಗೊಂಡಿದ್ದಲ್ಲಿ, ಪೂರ್ಣ ದಾಖಲಾತಿಗಳು ಹಾಗೂ ಚಿಕಿತ್ಸಾ ವಿವರಗಳೊಂದಿಗೆ ಆನ್ ಲೈನ್ ಮೂಲಕ ಅನುಷ್ಠಾನ ಏಜೆನ್ಸಿಗೆ (ಟಿಪಿಎ) ಚಿಕಿತ್ಸೆಗೆ ಪೂರ್ವಾನುಮತಿ ಕೋರಿ ಪ್ರಸ್ತಾವನೆ ಕಳುಹಿಸುವುದು. ಕೋರಿರುವ ಚಿಕಿತ್ಸೆಯು ನಿಯಮಗಳನ್ವಯ ಅರ್ಹತೆ ಇದ್ದಲ್ಲಿ ಪರಿಶೀಲಿಸಿ ಆನ್ ಲೈನ್ ಮೂಲಕವೇ ಟಿಪಿಎ ದವರು ಪೂರ್ವಾನುಮತಿ ನೀಡುವರು. ನಂತರ ಆಸ್ಪತ್ರೆಯವರು ಚಿಕಿತ್ಸೆಯನ್ನು ಪ್ರಕ್ರಿಯೆಯನ್ನು ಪ್ರಾರಂಭಿಸುವರು.

21. ಚಿಕಿತ್ಸಾ ವೆಚ್ಚದ ಬಿಲ್ಲುಗಳನ್ನು ಅನುಷ್ಠಾನ ಸಂಸ್ಥೆಯು ನೆಟ್‌ವರ್ಕ್ ಆಸ್ಪತ್ರೆಗಳಿಂದ ತರಿಸಿಕೊಂಡು ಟ್ರಸ್ಟ್‌ನಿಂದ ಮಂಜೂರು ಮಾಡಿಸಿಕೊಂಡು ನೇರವಾಗಿ ಆಸ್ಪತ್ರೆಗಳಿಗೆ ಪಾವತಿಸಲಾಗುತ್ತಿದೆ. ಆದ್ದರಿಂದ ಸದಸ್ಯರು ಯಾವುದೇ ಕಾರಣಕ್ಕೂ ಆಸ್ಪತ್ರೆಗೆ ಚಿಕಿತ್ಸಾ ವೆಚ್ಚ ನೀಡುವಂತಿಲ್ಲ. ಒಂದು ವೇಳೆ ಸದಸ್ಯರು ಚಿಕಿತ್ಸಾ ವೆಚ್ಚವನ್ನು ಪಾವತಿಸಿದರೆ ಅದಕ್ಕೆ ಟ್ರಸ್ಟ್ ಜವಾಬ್ದಾರಿಯಲ್ಲ.

22. ಆಸ್ಪತ್ರೆಗೆ ದಾಖಲಾಗುವ ಸಂದರ್ಭದಲ್ಲಿ ತಾವು ಯಶಸ್ವಿನಿ ಸದಸ್ಯರೆಂದು ತಿಳಿಸಿ ಐಡಿ ಕಾರ್ಡ್ ಹಾಜರು ಪಡಿಸಬೇಕು. ಚಿಕಿತ್ಸೆ/ಶಸ್ತ್ರಚಿಕಿತ್ಸೆ ಪಡೆದ ನಂತರ ಯಶಸ್ವಿನಿ ಸದಸ್ಯರು ಎಂದು ತಿಳಿಸಿದರೆ ಯೋಜನೆಯಡಿ ಸೌಲಭ್ಯ ದೊರೆಯುವುದಿಲ್ಲ. ಚಿಕಿತ್ಸೆ ಪಡೆಯುವಲ್ಲಿ ಏನಾದರೂ ಸಮಸ್ಯೆ ಉಂಟಾದಲ್ಲಿ ಯಶಸ್ವಿನಿ ಟ್ರಸ್ಟ್, ಸಂಬಂಧಿಸಿದ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ಸಂಬಂಧಿಸಿದ ಜಿಲ್ಲಾ ಸಮನ್ವಯಾಧಿಕಾರಿಗಳು ಅಥವಾ ಅನುಷ್ಠಾನ ಸಂಸ್ಥೆಯನ್ನು ಸಂಪರ್ಕಿಸಬಹುದು.

23. ಗುರುತಿನ ಕಾರ್ಡನ್ನು ಬೇರೆಯವರಿಗೆ ವರ್ಗಾಯಿಸತಕ್ಕದ್ದಲ್ಲ. ಯಾವುದೇ ಫಲಾನುಭವಿ ತಪ್ಪು ಮಾಹಿತಿ ಕೊಟ್ಟು ಯಶಸ್ವಿನಿ ನಿಯಮಗಳಿಗೆ ವಿರುದ್ಧವಾಗಿ ಕಾರ್ಡನ್ನು ಪಡೆದುಕೊಂಡಿದ್ದಲ್ಲಿ ಅಥವಾ ದುರ್ಬಳಕೆ ಮಾಡಿಕೊಂಡಲ್ಲಿ ಅಂತಹ ಕಾರ್ಡನ್ನು ರದ್ದು ಪಡಿಸಲಾಗುವುದು ಮತ್ತು ಕಾನೂನಿನ ಕ್ರಮಕ್ಕೆ ಗುರಿಪಡಿಸಲಾಗುವುದು. ಯಶಸ್ವಿನಿ ಕಾರ್ಡ್‌ನ್ನು ಫಲಾನುಭವಿಗಳು ಜೋಪಾನವಾಗಿ ಇಟ್ಟುಕೊಳ್ಳತಕ್ಕದ್ದು. ಒಂದು ವೇಳೆ ಕಾರ್ಡ್‌ನ್ನು ಕಳೆದು ಕೊಂಡಲ್ಲಿ ರೂ.250/-ಗಳ ಶುಲ್ಕವನ್ನು ಟ್ರಸ್ಟ್‌ಗೆ ಪಾವತಿಸಿ ಜಿಲ್ಲೆಯ ಉಪ ನಿಬಂಧಕರ ಮೂಲಕ ಟ್ರಸ್ಟ್‌ಗೆ ಮನವಿ ಸಲ್ಲಿಸಿ ಡೂಪ್ಲಿಕೇಟ್ ಕಾರ್ಡ್‌ನ್ನು ಪಡೆಯಬಹುದು.

**************************

## ಅನುಬಂಧ-2

| ಕ್ರ. ಸಂ | ಜಿಲ್ಲೆಯ ಹೆಸರು | 2022-23 | 2023-24 |
|---|---|---|---|
| | | ಒಟ್ಟು ಸದಸ್ಯರು | ಒಟ್ಟು ಸದಸ್ಯರು |
| 1 | 2 | 3 | 4 |
| 1 | ಬೆಂಗಳೂರು ವಲಯ-1 | 68785 | 51322 |
| 2 | ಬೆಂಗಳೂರು ವಲಯ-2 | 38628 | 29428 |
| 3 | ಬೆಂಗಳೂರು ವಲಯ-3 | 57029 | 42577 |
| 4 | ಬೆಂಗಳೂರು ವಲಯ-4 | 73873 | 54506 |
| 5 | ಬೆಂಗಳೂರು ಗ್ರಾಮಾಂತರ | 111744 | 103764 |
| 6 | ರಾಮನಗರ | 157875 | 147299 |
| 7 | ತುಮಕೂರು | 301502 | 257223 |
| 8 | ಕೋಲಾರ | 93523 | 91483 |
| 9 | ಚಿಕ್ಕಬಳ್ಳಾಪುರ | 76389 | 82347 |
| 10 | ಚಿತ್ರದುರ್ಗ | 121450 | 122059 |
| 11 | ದಾವಣಗೆರೆ | 148395 | 160838 |
| 12 | ಶಿವಮೊಗ್ಗ | 235098 | 193295 |
| 13 | ಕಲಬುರಗಿ | 68500 | 67234 |
| 14 | ಬಳ್ಳಾರಿ | 61347 | 59041 |
| 15 | ವಿಜಯನಗರ | 101104 | 99587 |
| 16 | ಯಾದಗಿರಿ | 19011 | 20201 |
| 17 | ರಾಯಚೂರು | 114075 | 115670 |
| 18 | ಕೊಪ್ಪಳ | 79823 | 77696 |
| 19 | ಬೀದರ್ | 122398 | 120619 |
| 20 | ಮೈಸೂರು | 341017 | 325945 |
| 21 | ಚಾಮರಾಜನಗರ | 101976 | 101932 |
| 22 | ಮಂಡ್ಯ | 326119 | 278913 |
| 23 | ಹಾಸನ | 194043 | 189192 |
| 24 | ಚಿಕ್ಕಮಗಳೂರು | 139661 | 129937 |
| 25 | ಕೊಡಗು | 80512 | 77751 |
| 26 | ದಕ್ಷಿಣ ಕನ್ನಡ | 258101 | 207731 |
| 27 | ಉಡುಪಿ | 322188 | 71870 |
| 28 | ಬೆಳಗಾವಿ | 257359 | 272202 |
| 29 | ವಿಜಯಪುರ | 115738 | 98207 |
| 30 | ಬಾಗಲಕೋಟೆ | 204456 | 178247 |
| 31 | ಧಾರವಾಡ | 85130 | 53634 |
| 32 | ಗದಗ | 62128 | 59342 |
| 33 | ಹಾವೇರಿ | 102409 | 103609 |
| 34 | ಉತ್ತರ ಕನ್ನಡ | 183283 | 112792 |
| | ಒಟ್ಟು | 4824669 | 4157493 |

Scanned with OKEN Scanner

Annexure- 3

## 2023-24 Yeshasvini Hospital List

| Sl.No. | Hospital Name | Govt/ Pvt | District | Address | Hospital Email ID | Hospital Phone Number |
|---|---|---|---|---|---|---|
| 1 | Aashakiran Maternity Hospital | Pvt | Bagalkot | Jagadal Road, Opp Keb, Banahatti, Bagalkot -587311. | ashakiranmhospital@gmail.com | 9902551958 |
| 2 | Arogyadhama Hospital | Pvt | Bagalkot | Arogyadham Hospital, Gokak Road, PD Budni, Mahalingapur-587312, Mudhol | drchannalmlp@gmail.com | 9448406316 |
| 3 | Ashirwad Hospital Bagalkot | Pvt | Bagalkot | vittal vantage Building, Deepam Colony, Near Rpotary Circle, Bagalkot. | ashirwadbgk@gmail.com | 9901878676 |
| 4 | Badakali Meternity & Children's Hospital | Pvt | Bagalkot | vidyagiri, 17th b Dharati plaza, engineering college Circle, Bagalkot | ashok_diya@yahoo.com | 9880227403 |
| 5 | Banashankari Eye Hospital | Pvt | Bagalkot | Dr. G. R. Masukar, Banashankari Eye Hospital, Mahaveer Road, Bagalkot | gmasurkar@yahoo.co.in | 9845666556 |
| 6 | Baragi Hospital | Pvt | Bagalkot | Baragi Hospital,Ragiv Gandhi Road,Near Durga Vihar, Bagalkote Dist. | gsbaragihospital@gmail.com | 9448031797 |
| 7 | Best Kuntoji Multispeciality Hospital, | Pvt | Bagalkot | Plot No D1, Sector NO-20,Near Kalabhavan, Navanagar, Bagalkot -587103. | Kuntojihospital@gmail.com | 9480597549 |
| 8 | Bhavi Hospital & Research Center | Pvt | Bagalkot | Bhavi Hospital & Research Center Near Bus stand Bagalkot-587 101 | drbkbhavi@gmail.com | 9480384901 |
| 9 | City Hospital | Pvt | Bagalkot | City Hospital,Uma maheshwar Road,Jamakandhi Taluk,Bagalkote Dist | yunus.cityhospital@gmail.com | 9448103212 |
| 10 | Dhanush Hospital | Pvt | Bagalkot | Dhanush Hospital, Extension area, beside water tank, Bagalkot. | dhanushhospital_bkt@Yahoo.com | 9845484233/ 08354-226533 |
| 11 | Dhanvantari Multispeciality Hospital | Pvt | Bagalkot | Dhanvantari Multispeciality Hospital, Ranichennamma Nagar, Near Basaveshwar Circle, Jamkhandi | gadaraddi.k143@gmail.com | 08353-223366 |
| 12 | Dinnimani Hospital | Pvt | Bagalkot | Rabakavi Road, Mahalingpur,Bagalokot -587312. | dinnimanihospital_mlp@rediffmail.com | 9448393828 |
| 13 | District Hospital | Govt | Bagalkot | District Surgeon, District Hospital, Bagalkot | dsbagalkote@gmail.com | 9449843160 |
| 14 | Doddannevara Hospital | Pvt | Bagalkot | Doddannevara Hospital ,Bagalkot | daddenavarhospital22@gmail.com | 9880413864 |
| 15 | Dr. Biradar Hospital | Pvt | Bagalkot | # 2670/1, Behind Head Post, Mudhol-587313, Bagalkot | gadaraddi.k143@gmail.com | 08353-223366 |
| 16 | Dr. H.R. Katti Hospital | Pvt | Bagalkot | Bendigere Layout Extension area, Rotary Circle Bagalkote-01 | kattihospital@gmail.com | 9845378505/08354-203200 |
| 17 | Dr. Kakhandi Eye Hospital | Pvt | Bagalkot | MatruSmruti Clinic, BusStand Road, Opp S.V.M College,Ilkal, Hungund, Bagalkote-587125 | akakhandki@gmail.com | 8123777451/9482500660/ 08351-270235 |
| 18 | Dr. R.G. Karudagimath Memorial Nursing Home | Pvt | Bagalkot | Dr. R.G. Karudagimath Memorial Nursing Home, Badami, Bagalkot | sunilkarudagimath@hotmail.com | 9448008033 |
| 19 | Dr.A.R Belagali's Surgical & Maternity Home | Pvt | Bagalkot | Dr.A.R Belagali's Surgical & Maternity Home,Vidya Nagar,Mudhol road,Mahalingapura,Bagalkote dist | drbelagalihospital@gmail.com | 9886077345 |
| 20 | Drishti Super Speciality Eye Hospital and Research Center | Pvt | Bagalkot | Drishti Super Speciality Eye Hospital and Research Center, Near Durga Vihar, Bagalkot | bckadiwal@gmail.com | 9739193657 |
| 21 | Eye Buddy Eye Hospital | Pvt | Bagalkot | Mirajakar Complex, Sector No:18,Plot No :20, CMC Road,Navanagar Bagalkot -587103. | rvpatil123@gmail.com | 9880190027 |
| 22 | Guled Hospital | Pvt | Bagalkot | Extenssion Area , Near kerudi Hospital,Bagalkot. | guledhospitalbgk@gmail.com | 9980524031 |
| 23 | Hosapeti eye care center | Pvt | Bagalkot | Hosapeti eye care center, shama plaza, hk road mudhol, Bagalkot | drsharanhospeti@gmail.com | 8762509818 |
| 24 | Hosur Hospital | Pvt | Bagalkot | Hosur Hospital, Near Brahmagaddi Math, Shivaji Circle, Mudhol, Bagalkot-587313 | drgirija.hosur@gmail.com | 9742913912 |
| 25 | Kakhandki Eye Hospital | Pvt | Bagalkot | Dr. Subhash K. Kakhandki Eye Hospital, Near Vittal Mandir,Ilkal, Bagalakot | subhaskhospital@gmail.com | 9535329935 |

| Sl.No. | Hospital Name | Govt/ Pvt | District | Address | Hospital Email ID | Hospital Phone Number |
|---|---|---|---|---|---|---|
| 26 | Kamakeri Children's & Meternity Hospital | Pvt | Bagalkot | Kamakeri Children's & Meternity Hospital,Beside PLD Bank , Shivaji Circle, Mudhol, Bagalkot | shrikant.kamakeri@gmail.com | 9535467066 |
| 27 | Kathare Nursing Home & Multispeciality Hospital | Pvt | Bagalkot | Kathare Nursing Home & Multispeciality Hospital, I Behind KSRTC Bus Stand, Ilkal, Hungund Tq, Bagalkot - 587125 | sunitakathari@yahoo.com | 08351-272738, 9448003283 |
| 28 | Krishna Eye Hospital | Pvt | Bagalkot | Krishna Hospital,Bijapur Road, Jamakhandi, Bagalkot | kishorenyamagoudar@gmail.com | 08353-223023/ 9448113023 |
| 29 | Kubsad Hospital | Pvt | Bagalkot | Dr. Shivanand Kubsad, Kubsad Hospital,Near Ranna Circle,Mudhol- 587 313, Research Center, Navnagar Bagalkot | kubsadhospital@gmail.com | 8951511808 |
| 30 | Mahantesh Multispeciality Hospital | Pvt | Bagalkot | Mahantesh Multispeciality Hospital and orthopedic and Taruma Centre,ilkal-Taluk, Bagakote | mahanteshhospital@gmail.com | 9741119090 |
| 31 | Mirji Hospital | Pvt | Bagalkot | Mirji Hospital, Extension Area, Bagalkot | mirjihospital123@gmail.com | 9743320104 |
| 32 | MM Joshi Eye Institute Pvt ltd, Bagalkot | Pvt | Bagalkot | Gujjar Complex,Opp: Sasnur petrol Pump, College Road, Bagalkot -587101. | ceo.mmjei@gmail.com | 7411072700 |
| 33 | Munlli Eye Care Center | Pvt | Bagalkot | Munlli Eye Care Center, Bagalkot | nbm1976@rediffmail.com | 9980400467 |
| 34 | Nadaf Nursing Home | Pvt | Bagalkot | Rabakavi, Bagalkot. | nadafnursinghome@gmail.com | 7019170914 |
| 35 | Nilugal Hospital | Pvt | Bagalkot | Nilugal Hospital, Anand Nagar, Badami Tq, Bagalkot - 587201 | drvirupax.n@gmail.com | 9448776140 |
| 36 | Orthocare Hospital | Pvt | Bagalkot | Orthocare Hospital, Centre for Orthopedics, Joint Replacement & Sports injury, Neare Sri Bhramhanand Ashram, Yaragatti Road, Rabakavi-587314, Jamkhandi, Bagalkot | orthocarehospitalrabkavi@gmail.com | 7795541008 |
| 37 | Padma Hospital | Pvt | Bagalkot | Padma Hospital,Padma Nagar , Terdal-587315,Jamakhandi Taluk.,Bagalkot | padmahospital063@gmail.com | 9620220900 |
| 38 | Patil Hospital | Pvt | Bagalkot | Double Road, Mahalingpur.Bagalkot | patilhospitalmlp1@gmail.com | 9448566864 |
| 39 | Patil Ortho & Trauma Centre Ilkal | Pvt | Bagalkot | Near Darga, NH -50 Ward No-7, Ilkal -587125, | patilhospital21@gmail.com | 7760718818 |
| 40 | Riti Life Care Hospital | Pvt | Bagalkot | Ghatnatti Plot, Near: JLBC Compund, Rabakavi Road, Mahalingpur-587312. | drmanc7@gmail.com | 8105654170 |
| 41 | Sai Aadhar Orthopaedic Centre | Pvt | Bagalkot | Sai Orthopaedic Hospital, Siddarameshwara Nagar, Mudhol, Bagalkot, | saiaadhar2010@gmail.com | 08350-280320 |
| 42 | Sai Leela Hospital, Mudhol | Pvt | Bagalkot | Sai Leela Hospital, Anjuman Complex, Near Bus Stand, Mudhol, Bagalkot | drpras08@gmail.com | 9449105936 |
| 43 | Saka Laparoscopy Hospital | Pvt | Bagalkot | Mahanta Belagu Complex,Kanti Circle Ilkal.Talk-Hunagund. | sakalaparoscopyhospital@gmail.com | 9448129268, 9740426480 |
| 44 | Sanadi Orthopaedic Hospital | Pvt | Bagalkot | Dr. G. N. Sanadi Sanadi Orthopaedic Hosptial Kudchi Road,Near Desai Circle, Jamkandi, Bagalkot | sanadihospital@gmail.com | 9448127469 |
| 45 | Sanjivini Children & Eye Hospital | Pvt | Bagalkot | Sanjivini Children & Eye Hospital, Next to lions school Road,Extension Area, Bagalkot | sanjivinismailbox@rediffmail.com | 08354-221121/ 9739902886 Fax No:08354-224770 |
| 46 | Shree Banashankari Hospital | Pvt | Bagalkot | Shree Banashankari Hospital, Opp Head Post Office, Guledagudda, Badami Tq, Bagalkot | sbhospitalgld@gmail.com | 9538393230 |
| 47 | Shri Abhinav Surgical Hospital | Pvt | Bagalkot | Abhinav Surgical Hospital, Jamkhandi, Bagalkot | abhinav.hospital@gmail.com | 08353-223245 / 9901375374 |
| 48 | Shri Krishna Hospital & Nursing Home | Pvt | Bagalkot | Shri Krishna Hospital & Nursing Home, Court Road, Jamkhandi - 587301, Bagalkot | srikrishanahospital20@gmail.com | 9448646192 |
| 49 | Shri Venkateshwara Hospital | Pvt | Bagalkot | Ramadurga Road Badami, Bagalkot | venkateshhosp2004@gmail.com | 9448655944 |
| 50 | Shrinivas Nethralaya Ilkal | Pvt | Bagalkot | Shrinivas Nethralaya 1st Floor, C.M. Sudi Complex, Near Bus Stand, Ilkal-587125 Bagalkot | arshinagodi@gmail.com | 9900294172 |
| 51 | Shrinivasa Nursing Home | Pvt | Bagalkot | Shrinivasa Nursing Home, Mahalingapur, Bagalkot. | shrinivas522012@gmail.com | 9008349449 |

| Sl.No. | Hospital Name | Govt/ Pvt | District | Address | Hospital Email ID | Hospital Phone Number |
|---|---|---|---|---|---|---|
| 52 | Sri Parvatesh Hospital | Pvt | Bagalkot | Sri Parvatesh Hospital, Kanthi Peth, Ward No 1, Guledagudda, Badami Tq, Bagalkot - 587203 | skrishnavardhan@gmail.com | 08357-250440, 9902599784 |
| 53 | Trishaladevi Super Speciality Eye Hospital | Pvt | Bagalkot | Trishaladevi Super Speciality Eye Hospital, Rabkavi, Jamkhandi, Bagalkot | drpadmajeet@gmail.com | 9986903343 |
| 54 | Ugran Kidney Care Hospital,Jamkhandi | Pvt | Bagalkot | Girish nagar, Near Sajji Hanuman Temple, Ramateerth Road, Jamakhandi -587301 | basuugran@gmail.com | 9980822296 |
| 55 | V.K.Patil Memorial Orthopeadic & Fracture Hospital | Pvt | Bagalkot | V.K.Patil Memorial Orthopeadic & Fracture Hospital, Nibalakara building Shivaji Circle, Mudhol, Bagalkot-587313 | rajgiraddi@gmail.com | 9743400467 |
| 56 | Venkatesh Hospital | Pvt | Bagalkot | Venkatesh Hospital, Mahalingpur - 587312, Tq Mudhol, Bagalkot | venkateshhospitalscheme@gmail.com | 9448132236 |
| 57 | Venkateshwar Maternity & Surgical Care Center | Pvt | Bagalkot | Venkateshwar Maternity & Surgical Care Center, Near Shivaji Circle, Mudhol - 587313 Dt Bagalkot | draravindnaik@gmail.com | 08350-280168, 9980400995 |
| 58 | Virinchi Hospital, Mahalingapur | Pvt | Bagalkot | Gokak Road, Mahalingapur -587312. | virinchihospitalmlp@gmail.com | 9449802236 |
| 59 | Vittal Eye Hospital | Pvt | Bagalkot | Vittal Eye Hospital, Opp Kerudi Hospital, Bagalkot | vittaleyehospital@gmail.com | 08354-223636/ 9448138729/9448287559 |
| 60 | A V Daddenavar | Pvt | Bagalkot | Sector no -22, Near Taluk office, Navanagar, Bagalkot -587103 | avdaddenavarhospital@gmail.com | 7892960819 |
| 61 | Renuka Hospital Badami | Pvt | Bagalkot | 1st Cross Tipu Nagar, Badami, TQ Badami District: Bagalkot - 587201 | drrajendramarakumbi@gmail.com | 9448222094 |
| 62 | AAdhar Eye Hospital,Belagavi | Pvt | Belagavi | Hazaratmaa Saheba Circle,Chinchali Corner GLBC Compund,Kudachi, Raibag (T), Belgavi -591311. | 9845303940sbc@gmail.com | 9845303940 |
| 63 | Aakanksha Eye and Child hospital | Pvt | Belagavi | Aakanksha Eye and Child hospital, Nipani, Belgaum - 591237 | drshetti@gmail.com | 08398-280276,9535217966, 9845875100 |
| 64 | Adarsh Health Care | Pvt | Belagavi | Shivabasav Nagar, P B Road, Hirebagewade, Belagavi . | adarsha.healthcare@gmail.com | 8050138296 |
| 65 | Ajit Nursing Home | Pvt | Belagavi | Ajit Nursing Home, Ankali Road, Raibag-591317, Belgaum | drgayathribane@gmail.com | 08331-225603/9448372241 |
| 66 | Apoorva Multi Speciality Hospital | Pvt | Belagavi | CTS-4635/2, Near Prakash Theater,Opp Dr S.P.M Road, Belgaum -590002. | apoorvahealthcarebelgaum@gmail.com | 9591434643 |
| 67 | Arihant Hospital(Unit of Dixit Healthcare Pvt ltd | Pvt | Belagavi | C-Square, CTS No.10632/A1/B,Nehru Nagar, Belagavi -590010 | arihanthospitalins@gmail.com | 9036102391 |
| 68 | Ashirwad Hospital | Pvt | Belagavi | #1445/3-B,3-2, Near Town Panchayat Station Road, Khanapur, Belagavi -591302 | idevagouda@gmail.com | 8050138296 |
| 69 | Basaveshwar Hospital | Pvt | Belagavi | Basdaveshwar Nagar Nadi-Ingalaganva Athani Taluka Dt-Belagavi | basaveshwarhospital14@gmail.com | 9902299735 |
| 70 | Bhate Hospital & Maternity Home | Pvt | Belagavi | Bhate Hospital & Maternity Home, Chikodi, Belgaum | ravibhate@rediffmail.com | 9739540520 |
| 71 | Chidanand Patil Hospital, Kore Nagar, Chikkodi-591201 | Pvt | Belagavi | Chidanand Patil Hospital, Kore Nagar, Chikkodi-591201 | drkcpatil.ckd@gmail.com | 08338-272666 9886190501 |
| 72 | Diyaa Hospital | Pvt | Belagavi | Diyaa Hospital, # 3582A/3B, Opp Central Bus Stand, Chikodi-591201 | diyaahospitals@gmail.com | 08338-275999 9844506999 |
| 73 | Dr. Ghodageri Nursing Home. | Pvt | Belagavi | Dr. Ghodageri Nursing Home.Gokak, Belgaum. | ghodageri.bb@gmail.com | 9448111626 |
| 74 | Dr. Kodkany's Eye Care Centre | Pvt | Belagavi | Dr. Kodkany's Eye Care Centre, Marti Galli, Belgaum | kodkanyhospital@gmail.com | 9739540520 |
| 75 | Dr.Bagewadies Eye Centre | Pvt | Belagavi | Dr.Bagewadies Eye Care Centre, 1345,Basvan Lane, Belgaum-2 | gurunes@rediffmail.com | 0831-2422316/5203442/ 5203467 |
| 76 | Dr.Navadgi N.H | Pvt | Belagavi | Dr.Navadgi Nursing Home,Saundatti,Belgaum | navadginh@gmail.com | 08330-222278/ 9972618527/9945811834 |
| 77 | Dr.Sajid.A.Tebhla,Eye Hospital Phaco & Laser Centre, | Pvt | Belagavi | #3374/1A, Bhagwant Sakha Complex,Near Pawan Hotel Behind Sai Medical, Hotel Road,Belagavi -590002. | drsajidatebhlaeyehospital@gmail.com | 9845076583 |

| Sl.No. | Hospital Name | Govt/ Pvt | District | Address | Hospital Email ID | Hospital Phone Number |
|---|---|---|---|---|---|---|
| 78 | Ganga Hospital | Pvt | Belagavi | Mayur School Road, Gokak (T), Belagavi -594307. | gangahospitalgokak@gmail.com | 9449001005 |
| 79 | Gunjigavi Multispeciality Hospital,Belagavi | Pvt | Belagavi | Madabhavi Road, Near Shivaji Circle, Athani -591304. | hospitalgunjigavi@gmail.com | 8628883887 |
| 80 | J.G. Cooperative Hospital & R.Institute Ltd. | Pvt | Belagavi | Dr. B. K. H. Patil, Sri.J.G.Co-operative Hospital,Ganghadhar Nagar,Ghataprabha, Belgaum-591321 | jgchho@gmail.com | 08332-286262/ 9448636336/9448863855 |
| 81 | Jayaratna Eye Hospital | Pvt | Belagavi | Jayaratna Eye Hospital, Ghataprabha, Gokak taluk, Belgaum | dramrutp@rediffmail.com | 08332-286118, 9886236103 |
| 82 | Jayaratna Maternity & Laproscopic Surgical Hospital | Pvt | Belagavi | Jayaratna Maternity & Laproscopic Surgical Hospital, Beside JSS College, Falls Road, Gokak, Court Circle, Gokak | drvrushabpatil23@gmail.com | 08332-227009 9986168951 |
| 83 | Jeevan Maternity & Surgical Hospital | Pvt | Belagavi | Jeevan Maternity & Surgical Hospital,Manjari, Chikkodi Taluk,Belgaum | dr.anupamakhichade@gmail.co m | 08338-252390/ 9449052390 |
| 84 | K M C Hospital | Pvt | Belagavi | Opp: Essar Petrol Pump Halyal road, Athani -591304. | Kmchospitalathani@gmail.com | 9972294018 |
| 85 | Kappalguddi Nursing Home | Pvt | Belagavi | Kappalguddi Nursing Home Opp Junior College Ground Gokak - 591 307 Belgaum | brkgkk08@rediffmail.com | 9448111151/226011 |
| 86 | Karnataka Health Institute | Pvt | Belagavi | Medical Director, Karnataka Health Institute, Ghataprabha, Belgaum Dist | khi.1935@gmail.com | 08332-286231 |
| 87 | KLE Centenary Charitable Hospital & Medical Research Centre | Pvt | Belagavi | KLE Centenary Charitable Hospital & Medical Research Centre, Yellur Road, Belagavi-590005 | pro.klecchospital@gmail.com | 0831-2413888 9448140226 |
| 88 | KLE Hospital | Pvt | Belagavi | Medical Director KLES PrabhakarKore & Medical Research Centre, Nehrunagar, Belgaum-590 010 | creditcellkleshospital@gmail.co m | 08312473777 extn:1827, 9844366188/ 9844459006 |
| 89 | Life Care Hospital | Pvt | Belagavi | Opp: Jamiya Masjid, 2nd floor,Bait-oz-Zohra complex,Darbar galli,Belagavi -590002. | lifecarebelgaum2011@gmail.co m | 8884611029 |
| 90 | Metri Hospital | Pvt | Belagavi | Metri Hospital, Beside Shala Sankeerna, Near Basaweshwar Circle, Athani, Belagavi-591304 | drvarsharanimetri@gmail.com | 08289-251282 9611531556 |
| 91 | Nandadeep Eye Hospital | Pvt | Belagavi | DRPNN Institute of Ophthalmic Sciences LLP.CTS No.28, First Floor, Opp: Yes Bank, Khanapur Road, Tilkawadi Belagavi-590006 | nandadeepeyehospitalbelgavi.tp a@gmail.com | 7340001000 |
| 92 | Navajeevan Hospital, | Pvt | Belagavi | # 3569, "Mahadev Arcade, 1st Floor, Shaniwar Khoot, Belagavi-590 002 | navjeevanhospital4444@gmail.c om | 9448864105/0833925450 5/ 9422614254/0233562397 3 |
| 93 | Netradarshan Super Specialty Eye Hospital | Pvt | Belagavi | CTS . 1300, First Floor, Ramlingkhind Road, Tikal Chowk Belgaum - 590001 | vijayakumarvhullur@gmail.com | 9845434960 |
| 94 | Padma Nursing Home | Pvt | Belagavi | Padma Nursing Home, Mahaveer Chowk, Ainapur-591303 Athani,Belgaum | rajugani53@gmail.com | 9448864105/0833925450 5/ 9422614254/0233562397 3 |
| 95 | Parvati Eye Care Centre | Pvt | Belagavi | Parvati Eye Care Centre Pujari Building, Ganesh Corner, K.C. Road, Chikodi-591201 Belgaum | drnrpatil06@rediffmail.com | 08338-273746/273843 |
| 96 | Patil Eye Hospital | Pvt | Belagavi | Dr. Shivanand. S. Patil, Patil Eye Hospital,1st Floor,Opp. Junior College Ground, Gokak-591307 Belgaum | patileyehospital@yahoo.co.in | 08332-229100/226397 |
| 97 | Patil Nursing Home | Pvt | Belagavi | Harugeri.Tal-Raibag Dt-Belagavi | hospital.patil@gmail.com | 9448406417/9742978349 |
| 98 | Rajiv Gandhi Rural Hospital & Medical Research Center | Pvt | Belagavi | Rajiv Gandhi Rural Hospital and Medical Research Center, Yamkanmaradi, Hukkeri, Belgaum | dr.hanji@rediffmail.com | 9449040555 |
| 99 | Sadanand Omkar Bone & Joint Hospital | Pvt | Belagavi | Sadanand Omkar Bone & Joint Hospital, Shah Complex, K.C. Road, Chikodi | drajit_79@yahoo.com | 08338-272617 9448535249 |
| 100 | Saideep Eye Hospital | Pvt | Belagavi | Saideep Eye Hospital, # 4833/15B, 3rd Floor, Above John Players, S.S. Empire, Beside B.D. Jatti College, Civil Hospital Road, Belagavi | drsandeepatil@gmail.com | 0831-2472517 9902472472 |
| 101 | Salagare Children Eye Hospital | Pvt | Belagavi | Dr Prabhakar Kore Nagar ChikkodiTal-Chikkodi,Dt-Belagavi | drsalgare@yahoo.com | 08338-272550 |
| 102 | Shirur Hospital | Pvt | Belagavi | G.P.No 560/P,Sahakara Nagar,Shindihatti Road,Hukkeri (T), Belagavi-591107. | drmanjunathshirur@gmail.com | 8277332419 |
| 103 | Shivaveerakshi Eye Hospital & Laser Center | Pvt | Belagavi | Shivaveerakshi Eye Hospital & Laser Center, 76, Kulkarni Galli,Bailhongal-591102, Belgaum | shivaveerakshi@gmail.com | 08288-237282/ 9901754101 |

| Sl.No. | Hospital Name | Govt/ Pvt | District | Address | Hospital Email ID | Hospital Phone Number |
|---|---|---|---|---|---|---|
| 104 | Shree Hospital | Pvt | Belagavi | Dharwad Road, Shivaji circle, Savadatti. | nayana.hemant6441@gmail.com | 9164406441 |
| 105 | Shree Nursing Home | Pvt | Belagavi | Shree Nursing Home Nehru Chouk Road, Ainapur- 591 303, Belgaum | vinodmudalgi@ymail.com | 9342056467 |
| 106 | Shree Ortho & Trauma Centre | Pvt | Belagavi | Gandhi Bhavan, Behind Hotal Sanman, College Road, Belgavi - 590001 | tpasotc@gmail.com | 8050138296 |
| 107 | Shri Daneshwari Surgical General Hospital | Pvt | Belagavi | 1st Floor, CTS 1195 Saraf Galli, Sahapur, Belagavi-590003 | shridaneshwarihospital@gmail.com | 9844097261.08312486885 |
| 108 | shri Mallikarjun Multispeciality Hospital | Pvt | Belagavi | Mallikarjun Multispeciality Hospital, Gandhinagar, Raibag, Belgaum | ningukambagi876@gmail.com | 94483492965 |
| 109 | Shri. S. B. Odeyar Memorial Hospital | Pvt | Belagavi | Dr. Ramanujan. B. Odeyar,Medical Director,Shri. S. B. Odeyar Memorial Hospital, Harugeri, Raibag, Belgaum. | odeyar.mahesh@rediff.com | 08331-257408/257238 |
| 110 | Siddarth Netralaya | Pvt | Belagavi | 3rd Floor, CTS NO 4830/1A, Opp.Bims Medical College Gate, De. B R Ambedkar Road, Belagavi | siddharthnetralaya@gmail.com | 9538967907 |
| 111 | Spandan Super Speciality Hospital | Pvt | Belagavi | Plot No-287, Sector No-02,Waddar chavani, Shivabasav Nagar,Belgavi -590010. | subhashpatil618@gmail.com | 9902895587 |
| 112 | Sri Sadguru Eye Hospital | Pvt | Belagavi | Sir Sadguru Eye Hospital, Chikodi, Belgaum District | sushmayalagachi@gmail.com | 9449650829 |
| 113 | Sri Sai Hospital | Pvt | Belagavi | Sri Sai Hospital, 17/5, Laxmi Nagar, Ganesh Peth Road, Vadgaon, Belgaum – 590 005 | drdodamani@gmail.com | 9980022888 |
| 114 | Sri Satya Sai Hospital | Pvt | Belagavi | Sri Satya Sai Hospital, Old court lane, Chikodi, Belgaum | rekhamusale9@gmail.com | 08353-223245 / 9901375374 |
| 115 | Sudarshan Eye Hospital | Pvt | Belagavi | Near Basveshwar Circle, Vittal Hotel Building, Athani, Belagavi - 591304. | sudarshaneyehospital28@gmail.com | 7829382817 |
| 116 | Sukh shanthi super speciality (S4) Hospital | Pvt | Belagavi | Sukh shanthi super speciality (S4) Hospital, Shivaji Circle, Gokak, Belgaum | s4hospital@yahoo.com | 9448141080 |
| 117 | Tekke Eye Clinic | Pvt | Belagavi | Shanti Nagar, Halyal Road,Athani,Belagavi – 591304. | sreetekkeeyeclinic@gmail.com | 9822277044 |
| 118 | Trishuladevi Superspeciality Eye Hospital | Pvt | Belagavi | Mahaveer Circle.Athani.Tal-Athani,Dt-Belagavi | drpadmajeet@gmail.com | NA |
| 119 | Venkatesh Maternity and Scanning Centre,Belagavi | Pvt | Belagavi | Old Venktesh Theater, Beside Shrinivas Petrol,PUMP Gurlapur Road, Mudalgi,Belagavi. | Veenakanakareddy2@gmail.com | 9481680111 |
| 120 | Venugram Hospitals (Belgaum) Private Limited | Pvt | Belagavi | CTS-785,RS No.674/7, Plot No.82 & 83.R.S.No.674/7,R.C. Nagar,(2nd cross, Hindu nagar), Angol,Belagavi -560006 | vhplbgm@gmail.com | 9513637819 |
| 121 | Vijaya Hospital | Pvt | Belagavi | UK-27, Behind B.D. Jatti, College, Ayodha Nagar 1 Belagavi-590001 | vijayahospital1@gmail.com | 0831-2431336 |
| 122 | Vijaya Ortho & Trauma Center | Pvt | Belagavi | Vijaya Ortho & Trauma Center, Opp BIMS Vijaya Road, Ayodhya Nagar, Belgaum | vijayaorthoandtraumacentre14@gmail.com | 0831-2432999, 0831-2952999 |
| 123 | Yash Hospital | Pvt | Belagavi | Yash Hospital,. 4924/3, Mahadura Road,Belgaum | yashhospitalbgm@yahoo.com | 9844120615/9844900000 |
| 124 | YASHASWINI MULTISPECIALITY HOSPITAL , ATHANI | Pvt | Belagavi | SHIVAJI CIRCLE, MIRAJ ROAD, ATHANI | yashaswinihospital53@gmail.com | 9900575752 / 9449291849 |
| 125 | Ballari Hrudayalaya & Super Speciality Hospital | Pvt | Bellary | #99/100, w.no.20, 3rd Cross, Near Bala Bharti School,Gandhi Nagar, Bellari-583101. | ballarihrudayalaya@gmail.com | 9742443079 |
| 126 | Danamma Super Speciality Hospital | Pvt | Bellary | Danamma Super Speciality Hospital,135,Kalacholan Compound,Bellary-583101 | cashless.dsh21@gmail.com | 08392-270361/ 9035499997 |
| 127 | Jindal Sanjeevani Hospital | Pvt | Bellary | Jindal Sanjeevani Hospital,Po Vidya Nagar-583275,Bellary | jsh@jsw.in | 08395-250700, 9916319434 Fax: 08395-250685 |
| 128 | Vijaynagaraj Super Speciality Eye Care & Ballari Vitreo Retinal Laser Surgical Centre | Pvt | Bellary | Beside St. Marry Hospital, Near VIMS Cantonment, Ballari - 583104 | vijimad@yahoo.com | 08392244099/9845946929 |
| 129 | Madhuri Nursing Home | Pvt | Bellary | Gandhi Nagar, Moka road, Opp: Indian oil Petrol Bank,Bellari. | madan.tambi@gmail.com | 9036938148 |